**<u>ಸಹಾಯಕ ಸರ್ಕಾರಿ ಅಭಿಯೋಜಕರು–ವ–ಸಹಾಯಕ ಸರ್ಕಾರಿ ವಕೀಲರ ನೇಮಕಾತಿ ಸಮಿತಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಕಾವೇರಿ ಭವನ, 6ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು – 560 009</u>**

**ಅಧಿಸೂಚನೆ ಸಂಖ್ಯೆ:ಡಿಪಿಎನ್:ನೇಸ:09:2019–20**
**ಬೆಂಗಳೂರು, ದಿನಾಂಕ: 20ನೇ ಡಿಸೆಂಬರ್ 2021.**

ಸರ್ಕಾರದ ಆದೇಶ ಸಂಖ್ಯೆ: ಒಇ 279 ಪಿಪಿಇ 2018(ಭಾಗ–1), ದಿನಾಂಕ: 17.07.2019ರ ಪ್ರಕಾರ ಸಹಾಯಕ ಸರ್ಕಾರಿ ಅಭಿಯೋಜಕರು–ವ–ಸಹಾಯಕ ಸರ್ಕಾರಿ ವಕೀಲರ ನೇಮಕಾತಿಗೆ ಸಂಬಂಧಿಸಿದಂತೆ ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಡಿಪಿಎನ್:ನೇಸ:09:2019–20, ದಿನಾಂಕ: 26.10.2021ರ ಪ್ರಕಾರ ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ 1573 ಅಭ್ಯರ್ಥಿಗಳ ಪಟ್ಟಿಯನ್ನು ಈ ಇಲಾಖೆಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಿಸಿದ ಕಛೇರಿಗಳ ಸೂಚನಾ ಫಲಕಗಳಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.

ಮೇಲೆ ಕಾಣಿಸಿದ ನೇಮಕಾತಿಗೆ ಸಂಬಂಧಿಸಿದಂತೆ ಮುಖ್ಯ ಪರೀಕ್ಷೆಯನ್ನು ದಿನಾಂಕ: **29.01.2022** ಮತ್ತು **30.01.2022** ರಂದು (ಶನಿವಾರ ಹಾಗೂ ಭಾನುವಾರದಂದು) ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು.

ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿನ ಕ್ರ.ಸಂ. **1070**, ರಿಜಿಸ್ಟರ್ ನಂ.**UA346**ರ ಅಭ್ಯರ್ಥಿ ಶ್ರೀ ವೆಂಕಟರಾಮು.ಸಿ.ಎಸ್., ಅವರನ್ನು ಹೊರತುಪಡಿಸಿ, ಉಳಿದ ಅಭ್ಯರ್ಥಿಗಳು ಈ ಕೆಳಕಂಡಂತೆ ಶುಲ್ಕವನ್ನು ಪಾವತಿಸುವ ಷರತ್ತಿಗೊಳಪಟ್ಟು ಮುಖ್ಯ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿರುತ್ತಾರೆ.

| | | |
|---|---|---|
| 01. | ಸಾಮಾನ್ಯ ವರ್ಗ ಹಾಗೂ ಇತರೆ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳು ಪಾವತಿಸಬೇಕಾದ ಪರೀಕ್ಷಾ ಶುಲ್ಕ | ರೂ. 2,000–00 |
| 02. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಪಾವತಿಸಬೇಕಾದ ಪರೀಕ್ಷಾ ಶುಲ್ಕ | ರೂ. 1,000–00 |

ಮುಖ್ಯ ಪರೀಕ್ಷಾ ಶುಲ್ಕವನ್ನು ದಿನಾಂಕ: 31.12.2021ರೊಳಗಾಗಿ **SB Collect Platform** ನಲ್ಲಿ **Online (UPI/NEFT Etc)** ಮುಖಾಂತರ ಪಾವತಿಸತಕ್ಕದ್ದು. ನಂತರ ದಿನಾಂಕ: 07.01.2022ರವರೆಗೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದೊಂದಿಗೆ ಪ್ರತಿ ದಿನಕ್ಕೆ ರೂ. 50–00ರಂತೆ ದಂಡ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುತ್ತದೆ.

ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ (ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಡಿಪಿಎನ್:ನೇಸ:09:2019–20, ದಿನಾಂಕ: 26.10.2021ರ ಪ್ರಕಾರ ಕ್ರ.ಸಂ. **1070**, ರಿಜಿಸ್ಟರ್ ನಂ. **UA346**ರ ಅಭ್ಯರ್ಥಿ ಶ್ರೀ ವೆಂಕಟರಾಮು.ಸಿ.ಎಸ್.,ಅವರನ್ನು ಹೊರತುಪಡಿಸಿ) ಅಭ್ಯರ್ಥಿಗಳು ಮುಖ್ಯ ಪರೀಕ್ಷಾ ಶುಲ್ಕವನ್ನು ಪಾವತಿಸಲು ಹಾಗೂ ಸಲ್ಲಿಸಬೇಕಾದ ವಿವರಗಳ ಬಗ್ಗೆ **SB Collect Platform** ಗೆ ಸಂಬಂಧಿಸಿದ **<u>https://www.onlinesbi.sbi/sbicollect/icollecthome.htm?corpid4464761</u>** ಲಿಂಕನ್ನು ಉಪಯೋಗಿಸಬಹುದಾಗಿದೆ.

ಮೇಲ್ಕಂಡ ಲಿಂಕನ್ನು ಅಭ್ಯರ್ಥಿಗಳು ಶುಲ್ಕ ಪಾವತಿ ಮತ್ತು ವಿವರ ಸಲ್ಲಿಕೆಗಾಗಿ ಉಪಯೋಗಿಸುವ ಸಂದರ್ಭದಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿಸುವ ಉದ್ದೇಶಗಳಿಗಾಗಿ ಮಾತ್ರ **"Category"** ಎಂಬುದಾಗಿ ಕಾಣಿಸಿಕೊಳ್ಳುವ ಅಂಕಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವರ್ಗದ ಅಭ್ಯರ್ಥಿಗಳು ಆ ಅಂಕಣವನ್ನು "ಸಾಮಾನ್ಯ (ಜನರಲ್)" ಎಂಬುದಾಗಿ ಭರ್ತಿ ಮಾಡತಕ್ಕದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಆ ಅಂಕಣದಲ್ಲಿ ತಮಗೆ ಸಂಬಂಧಿಸಿದ ವರ್ಗವನ್ನು ನಮೂದಿಸಿ ಆ ಅಂಕಣವನ್ನು ಭರ್ತಿ ಮಾಡತಕ್ಕದ್ದು.

"Selected Category" ಎಂಬುದಾಗಿ ಕಾಣಿಸಿಕೊಳ್ಳುವ ಅಂಕಣದಲ್ಲಿ ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಡಿಪಿಎನ್:ನೇಸ:09:2019–20, ದಿನಾಂಕ:26.10.2021ರನ್ವಯ ಯಾವ ವರ್ಗದಡಿಯಲ್ಲಿ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹತೆಯನ್ನು ಪಡೆದುಕೊಂಡಿರುತ್ತಾರೋ ಆ ವರ್ಗವನ್ನು ನಮೂದಿಸಿ ಆ ಅಂಕಣವನ್ನು ಭರ್ತಿ ಮಾಡತಕ್ಕದ್ದು.

ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಲಾಗಿರುವ ದಿನಾಂಕದೊಳಗಾಗಿ ದಂಡ ರಹಿತ/ ದಂಡ ಸಹಿತ ಶುಲ್ಕ ಪಾವತಿಸುವ ಜವಾಬ್ದಾರಿ ಮುಖ್ಯ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳಾಗಿದ್ದಾಗಿರುತ್ತದೆ. ನಿಗದಿತ ದಿನಾಂಕದೊಳಗೆ ದಂಡ ರಹಿತ/ ದಂಡ ಸಹಿತ ಪರೀಕ್ಷಾ ಶುಲ್ಕವನ್ನು ಪಾವತಿಸದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಹಾಜರಾಗಲು ಅರ್ಹರಾಗುವುದಿಲ್ಲ.

ಮೇಲ್ಕಂಡ ದಿನಾಂಕಗಳಂದು ಮುಖ್ಯ ಪರೀಕ್ಷೆಯನ್ನು ನಡೆಸಲಾಗುವ ಸಮಯ, ಪರೀಕ್ಷಾ ಕೇಂದ್ರಗಳ ವಿವರ, ಪ್ರವೇಶ ಪತ್ರ ಪಡೆಯುವ ವಿಧಾನ ಇತ್ಯಾದಿ ಮಾಹಿತಿಗಳನ್ನು ದಿನಾಂಕ: 10-01-2022ರ ನಂತರ ಪ್ರಕಟಿಸಲಾಗುವುದು.

20/12/2021

**( ಹೆಚ್.ಕೆ. ಜಗದೀಶ್ )**
ನಿರ್ದೇಶಕರು(ಪ್ರ)
ಹಾಗೂ ನೇಮಕಾತಿ ಸಮಿತಿ ಸದಸ್ಯ ಕಾರ್ಯದರ್ಶಿಗಳು,
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ಇಲಾಖೆ, ಬೆಂಗಳೂರು

**<u>ಪ್ರತಿಯನ್ನು: ಇ–ಮೇಲ್ ಮುಖಾಂತರ ಸಲ್ಲಿಸಲಾಗಿದೆ/ಕಳುಹಿಸಲಾಗಿದೆ.</u>**

1. ರಾಜ್ಯದ ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಛೇರಿಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಗೌರವಪೂರ್ವಕವಾಗಿ ಕೋರಲಾಗಿದೆ.
2. ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು, ಅವರ ಮಾಹಿತಿಗಾಗಿ ಹಾಗೂ ರಾಜ್ಯದ ಎಲ್ಲ ವಕೀಲರ ಸಂಘಗಳಲ್ಲಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ವಿನಂತಿಸಲಾಗಿದೆ.
3. ರಿಜಿಸ್ಟ್ರಾರ್, ನ್ಯಾಷನಲ್ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಭಾವಿ ಬೆಂಗಳೂರು ಇವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಕಾನೂನು ಅಧಿಕಾರಿಗಳು(ಹಿರಿಯ), ಅವರ ಮಾಹಿತಿಗಾಗಿ ಹಾಗೂ ತಮ್ಮ ಕಛೇರಿಯನ್ನು ಒಳಗೊಂಡಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಭಿಯೋಜಕರ ಕಛೇರಿಯ ಸೂಚನಾ ಫಲಕಗಳಲ್ಲಿ ತಕ್ಷಣ ಪ್ರಕಟಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿದೆ.
5. ಕಛೇರಿ ಸೂಚನಾ ಫಲಕಕ್ಕೆ